## *ದಿನಾಂಕ: 15-12-2016 ರಂದು ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು*

ಸಭೆಯಲ್ಲಿ ಹಾಜರಿದ್ದವರು

1. ಶ್ರೀ ಎಲ್. ಕೃಷ್ಣಮೂರ್ತಿ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು(ಪ್ರ)
2. ಶ್ರೀಇ.ದೊಡ್ಡನಾಗಯ್ಯ, ಕಾರ್ಯಪಾಲಕ ಅಭಯಂತರರು, ಲೋಕೋಪಯೋಗಿ ಇಲಾಖೆ.
3. ಶ್ರೀ ಜಯಪ್ರಕಾಶ್, ಸಹಾಯಕ ಅಭಿಯಂತರರು, ಲೋಕೋಪಯೋಗಿ ಇಲಾಖೆ.
4. ಶ್ರೀಮತಿ. ಶ್ರೀಲತಾ ಕೋಟೇಮಠ್, ಅಧೀನ ಕಾರ್ಯದರ್ಶಿ, ಕಮಾಆಯೊಗ.

ಸಭೆಯಲ್ಲಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.

1. ಕರ್ನಾಟಕ ಮಾಹಿತಿ ಆಯೋಗದ ನೂತನ ಕಟ್ಟಡ ನಿರ್ಮಾಣದ ಪ್ರಗತಿಯ ಕುರಿತು ಕರೆದ ತುರ್ತು ಸಭೆಯಲ್ಲಿ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು(ಪ್ರ) ಇವರು ಕಟ್ಟಡದ ಇತ್ತೀಚಿನ ಪ್ರಗತಿಯ ಬಗ್ಗೆ ಕಾರ್ಯಪಾಲಕ ಅಭಯಂತರರನ್ನು ವಿಚಾರಿಸಿ ಕಟ್ಟಡವನ್ನು ಆಯೋಗದ ವಶಕ್ಕೆ ನೀಡುವ ಕುರಿತು ಅಂತಿಮ ದಿನಾಂಕವನ್ನು ತಕ್ಷಣ ನಿಗಧಿ ಪಡಿಸುವಂತೆ ಸೂಚಿಸಿದರು. ಕಾರ್ಯಪಾಲಕ ಅಭಯಂತರರು ನೂತನ ಕಟ್ಟಡದ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿದ್ದು, ಕಿಟಕಿ ಬಾಗಿಲುಗಳ ಪೈಂಟಿಂಗ್ ಹಾಗೂ ಪಾಲಿಷ್ ಕಾರ್ಯ ತ್ವರಿತ ಗತಿಯಲ್ಲಿ ನಡೆಸುತ್ತಿರುವುದಾಗಿ ತಿಳಿಸುತ್ತಾ ಕಟ್ಟಡದ ಆಂತರಿಕ ಕಾಮಗಾರಿಗಳು (ಇಂಟೀರಿಯರ್ಸ್) ಪೂರ್ಣಗೊಳ್ಳಲು ಕನಿಷ್ಠ ಒಂದು ತಿಂಗಳು ಅವಕಾಶ ಬೇಕೆಂದು ತಿಳಿಸಿದ್ದು, ಇದರೊಂದಿಗೆ fire fighting ನಿರ್ವಹಣೆಗೆ ಸಂಬಂದಿಸಿದ ಸಾಮಗ್ರಿಗಳ ಅಳವಡಿಕೆ ಕಾರ್ಯ ನಡೆಸಲಾಗುತ್ತಿದ್ದು false celing ಅನ್ನು ಮಾಡಲು ವಿಳಂಬವಾಗುತ್ತಿದೆ ಎಂಬ ಅಂಶ ಸಭೆಯ ಗಮನಕ್ಕೆ ತಂದರು.

2. ಈ ಎಲ್ಲಾ ಅಂಶಗಳನ್ನು ಆಲಿಸಿದ ಮಾನ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ) ಇವರು ಜನವರಿ ಮಾಹೆಯಲ್ಲಿ ಕಟ್ಟಡದ ಉದ್ಘಾಟನಾ ಕಾರ್ಯಕ್ಕಾಗಿ ಮಾನ್ಯ ಮುಖ್ಯ ಮಂತ್ರಿಗಳಿಂದ ದಿನಾಂಕ ನಿಗಧಿ ಪಡಿಸಬೇಕಾಗಿರುವುದರಿಂದ ದಿನಾಂಕವನ್ನು ಈ ಕೂಡಲೆ ನಿರ್ಧರಿಸಬೇಕೆಂದು ತಿಳಿಸಿದರು. ಇದಕ್ಕೆ ಸಂಬಂದಿಸಿದ್ದ ಕಾರ್ಯಪಾಲಕ ಅಭಯಂತರರು, ಹಾಗೂ ಸಹಾಯಕ ಅಭಯಂತರರು ದಿನಾಂಕ: 25-01-2017ರೊಳಗಾಗಿ ಕಾರ್ಯ ಪೂರ್ಣಗೊಳ್ಳಲಿದ್ದು, ಈ ಸಂಬಂಧ ಆಯೋಗಕ್ಕೆ ಪತ್ರವನ್ನು ಬರೆಯುವುದಾಗಿ ತಿಳಿಸಿದರು. ಮಾನ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ) ರವರು ಅದಕ್ಕೆ ಒಪ್ಪಿ ಅವರಿಂದ ಪತ್ರವನ್ನು ಕಳುಹಿಸಿವಂತೆ ಹಾಗೂ ಕಡ್ಡಾಯವಾಗಿ ನಿಗಧಿತ ದಿನಾಂಕಕ್ಕೆ ಕಟ್ಟಡದ ಕಾರ್ಯ ಪೂರ್ಣಗೊಂಡಿರಬೇಕು ಎಂದು ಅವರಿಗೆ ಮತ್ತೋಮ್ಮೆ ಸೂಚಿಸುತ್ತಾ ಈ ಕಾರ್ಯ ಯಾವುದೇ ತಡೆಯಿಲ್ಲದಂತೆ ನೇರವೇರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಕಾರ್ಯದರ್ಶಿಗಳು ಕರ್ನಾಟಕ ಮಾಹಿತಿ ಆಯೋಗ ಇವರಿಗೆ ಸೂಚಿಸಿದರು.

ಕ್ರಮ ಕಾರ್ಯದರ್ಶಿ

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು(ಪ್ರ)